MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - THURSDAY 11-8-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಆಗಸ್ಟ್ 1-10ರ ತನಕ ಮಲೇಶಿಯನ್ ಪಾಮೆಣ್ಣೆ ರಫ್ತು 10 ಶೇಕಡಾ ಹೆಚ್ಚಳ

ಆಗಸ್ಟ್ 1-10ರ ತನಕ ಮಲೇಶಿಯನ್ ಪಾಮೆಣ್ಣೆ ರಫ್ತು ಹಿಂದಿನ ಇದೇ ಅವಧಿಗಿಂತ 10 ಶೇಕಡಾ ಹೆಚ್ಚಳವಾಗಿದೆ. ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 3 ಶೇಕಡಾ ಹೆಚ್ಚಳವಾಗಿದೆ. ಉತ್ಪಾದನೆ ಹೆಚ್ಚಳದಿಂದ ಮಲೇಶಿಯನ್ ಪಾಮೆಣ್ಣೆ ದಾಸ್ತಾನು ಜುಲೈ ತಿಂಗಳಲ್ಲಿ ಹಿಂದಿನ 8 ತಿಂಗಳಲ್ಲೇ ಗರಿಷ್ಠ ಮಟ್ಟಕ್ಕೇರಿದೆ. ಇಂಡೋನೇಶೀಯಾದ ಜೂನ್ ತಿಂಗಳ ಪಾಮೆಣ್ಣೆ ರಫ್ತು 2.33 ಮಿಲಿಯನ್ ಟನ್‌ಗಳಾಗಿವೆ.

## ಸೋಯಾಬೀನ್ ಬಿತ್ತನೆ ಹೆಚ್ಚಳ

ಈ ವರ್ಷ 117.50 ಲಕ್ಷ ಹೆಕ್ಟೇರ್‌ಗಳಲ್ಲಿ ಸೋಯಾಬೀನ್ ಬಿತ್ತನೆಯಾಗಿದ್ದು ಹಿಂದಿನ ವರ್ಷ 1115.10 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಬಿತ್ತನೆಯಾಗಿತ್ತು. ಅಕ್ಟೋಬರ್ 2021 ಜುಲೈ 2022 ಅವಧಿಯಲ್ಲಿ ಸೋಯಾಮೀಲ್ ರಫ್ತು 5.86 ಲಕ್ಷ ಟನ್‌ಗಳಾಗಿದ್ದು, ಹಿಂದಿನ ವರ್ಷದ ಇದೇ ಅವಧಿಯಲ್ಲಾಗಿದ್ದ 18.98 ಲಕ್ಷ ಟನ್‌ಗಳಿಗಿಂತ 69 ಶೇಕಡಾ ಇಳಿಕೆಯಾಗಿದೆ. ಒಟ್ಟು 6.5 ಲಕ್ಷ ಟನ್ ಸೋಯಾಮೀಲ್ ಈ ವರ್ಷ ರಫ್ತಾಗುವ ಅಂದಾಜು ಮಾಡಲಾಗಿದ್ದು ದೇಶೀಯವಾಗಿ 55 ಲಕ್ಷ ಟನ್ ಮಾರಾಟವಾಗಲಿದೆಯೆನ್ನಲಾಗಿದ್ದು, ಹಿಂದಿನ ಅಂದಾಜು 54 ಲಕ್ಷ ಟನ್ ಗಳಿಂದ ಹೆಚ್ಚಳವಾಗುವುದೆಂದು ಅಂದಾಜಿಸಲಾಗಿದೆ. ಕ್ಯಾರಿ ಜವರ್ ಸೋಯಾಬೀನ್ ದಾಸ್ತಾನು ಅಕ್ಟೋಬರ್ 2022 ರಲ್ಲಿ 27.22 ಲಕ್ಷ ಟನ್ ಗಳಾಗಬಹುದೆಂದು ಅಂದಾಜಿಸಲಾಗಿದೆ.

## ಉತ್ತಮ ಬೇಡಿಕೆಯಿಂದ ಜೋಳ ದರ ಹೆಚ್ಚಳ

ದೇಶೀ ಮಾರುಕಟ್ಟೆಗಳಲ್ಲಿ ಪೌಲ್ಟ್ರಿ ವಿಭಾಗದಿಂದ ಉತ್ತಮ ಬೇಡಿಕೆಯಿಂದ ಜೋಳ ದರ ಹೆಚ್ಚಳವಾಗಿದೆ. ದಾವಣಗೆರೆ ಹಾಗೂ ಬಿಹಾರದ ಮಾರುಕಟ್ಟೆಗಳಲ್ಲಿ ಜೋಳ ದರ ಹೆಚ್ಚಳವಾಗಿದೆ. ಕೆಲವಡೆಗಳಲ್ಲಿ ಮಳೆಗೆ ಬೆಳೆಹಾನಿಯ ವರದಿಯಾಗಿದೆ. ಪಂಜಾಬ್ ನಲ್ಲಿ ಕೀಟಬಾದೆಯಿಂದ ವ್ಯಾಪಕ ಬೆಳೆಹಾನಿಯಾಗಿದೆಯೆನ್ನಲಾಗಿದೆ.

## ಭತ್ತ ಬಿತ್ತನೆ ಪ್ರದೇಶ 13 ಶೇಕಡಾ ಇಳಿಕೆ

2021-22ರ ಖಾರೀಫ್ ಭತ್ತ ಬಿತ್ತನೆ 274.30 ಲಕ್ಷ ಹೆಕ್ಟೇರ್‌ಗಳಾಗಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ 341.14 ಹೆಕ್ಟೇರ್ ಪ್ರದೇಶಗಳಲ್ಲಿ ಭತ್ತ ಬಿತ್ತನೆಯಾಗಿದೆಯೆನ್ನಲಾಗಿದೆ. ಹಿಂದಿನ ವರ್ಷ 129.66 ಮಿಲಿಯನ್ ಟನ್ ಅಕ್ಕಿ ಉತ್ಪಾದನೆಯಾಗಿತ್ತು. ಈ ವರ್ಷ 10 ಮಿಲಿಯನ್ ಟನ್ ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಯಿದೆ. ಸರಕಾರಿ ದಾಸ್ತಾನಿನಲ್ಲಿ 13.05 ಮಿಲಿಯನ್ ಟನ್ ಆಹಾರ ಭದ್ರತಾ ದಾಸ್ತಾನಿರಬೇಕಾಗಿದ್ದು ಈಗ ದಾಸ್ತಾನು 47 ಮಿಲಿಯನ್ ಟನ್‌ಗಳಿವೆಯೆನ್ನಲಾಗಿದೆ. ಬಿತ್ತನೆ ಇಳಿಕೆಯಾಗುತ್ತಲಿದ್ದು, ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಯಿಂದ ಭತ್ತ, ಅಕ್ಕಿ ದರಗಳು ಹೆಚ್ಚಳವಾಗುತ್ತಿದೆ.

## ಬೇಳೆಕಾಳು ಬಿತ್ತನೆ

2022-23 ಕ್ಕೆ ಸರಕಾರ 105.5ಲಕ್ಷ ಟನ್ ಬೇಳೆಕಾಳು ಉತ್ಪಾದನೆಯ ಗುರಿಯಿರಿಸಿಕೊಂಡಿದೆಯೆನ್ನಲಾಗಿದ್ದು, ನಾಟಿಯ ಸಾಮಾನ್ಯ ಪ್ರದೇಶ 140 ಲಕ್ಷ ಹೆಕ್ಟೇರ್‌ಗಳಾಗಿದ್ದು, ಆಗಸ್ಟ್ 5, 2022 ರ ತನಕ 116.4 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ನಾಟಿಯಾಗಿದೆಯೆನ್ನಲಾಗಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ 119.4 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ನಾಟಿಯಾಗಿತ್ತು. 39.8 ಲಕ್ಷ ಹೆಕ್ಟೇರ್ ಜಾಗದಲ್ಲಿ ಬಿತ್ತನೆಯಾಗಬೇಕಾದ ತೊಗರಿ 10 ಶೇಕಡಾ ಹಿನ್ನಡೆಯಲ್ಲಿದೆ, ಉದ್ದು 31.8 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ಆಗಬೇಕಾದಲ್ಲಿ 2 ಲಕ್ಷ ಹೆಕ್ಟೇರ್‌ಗಳ ಹಿನ್ನಡೆಯಲ್ಲಿದ್ದು, ಹೆಸರುಕಾಳು 31.8 ಲಕ್ಷ ಹೆಕ್ಟೇರ್‌ಗಳಾಗಬೇಕಾಗಿದ್ದು, 31 ಲಕ್ಷ ಹೆಕ್ಟೇರ್ ಪ್ರದೇಶದ ಗುರಿ ತಲುಪಿದೆಯೆನ್ನಲಾಗಿದೆ. ತೊಗರಿ, ಉದ್ದು ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಗಳಿದ್ದು, ಈಗಾಗಲೇ ದರ ಹೆಚ್ಚಳವಾಗಿದೆ. ಆದರೆ ಆಮದು ಮಾರ್ಚ 2023 ರ ತನಕ ತೆರಿಗೆ ಮುಕ್ತವಿದ್ದು, ದಕ್ಷಿಣ ಆಫ್ರಿಕಾ, ಮಾನ್ಮಾರ್‌ಗಳಿಂದ ಆಮದಾಗಲಿದ್ದು, ಪೂರೈಕೆ ಕಾಯ್ದು ಕೊಳ್ಳುವಲ್ಲಿ ಸಹಾಯಕವಾಗಲಿದೆ. ಬಿತ್ತನೆ ಗುರಿಮಟ್ಟದಲ್ಲಿ ಉತ್ಪಾದನೆ ಹೆಚ್ಚಳವಾದಲ್ಲಿ ಹೊಸ ಬೆಳೆಯ ಆವಕದ ನಂತರ ದರ ಇಳಿಕೆಯಾಗುವ ಸಾಧ್ಯತೆ ಇದೆ.